ಕೂಳೆ ಹೊಲದ ಮೇಲೆ ನೆರಳಿನಂತೆ ಕಾಲೂರುತ್ತಾ ನಡೆಯತ್ತಿದ್ದಳು. ಬಡತನಕ್ಕೆ ಹೊಂದಿಕೊಂಡಿದ್ದ ಅವಳ ಮುಖದಲ್ಲಿ ಭಯ ಮತ್ತು ಉದ್ವೇಗದಿಂದ ಉಸಿರಾಟ ತುಸು ಬಿರುಸುಗೊಂಡಿತ್ತು. ಬರಿ ಹಗ್ಗ ಮಾಡಿ ಮಾರೋದರಿಂದಲೇ ಹೊಟ್ಟೆ ತುಂಬುತ್ತಿರಲಿಲ್ಲ. ಗಂಡ ಸತ್ತ ನಂತರ ಹುಟ್ಟಿದ ಒಂಬತ್ತು ತಿಂಗಳ ಕೂಸು ಕಲ್ಯಾಣಮ್ಮನನ್ನು ಸಾಕಲು ಏನೂ ತೋಚದೆ ಮಾಸ್ತಮ್ಮ ಬೇರೆ ದಾರಿಯಿಲ್ಲದೆ ಈ ದಾರಿ ತುಳಿದಿದ್ದಳು. ಮನಸ್ಸು ಒಪ್ಪಿರಲಿಲ್ಲ! ಬಡತನ ಅವಳನ್ನು ಬೆನ್ನಟ್ಟಿದ್ದರಿಂದ ಅನಿವಾರ್ಯವಾಗಿ ಈ ಯೋಚನೆ ಅವಳಲ್ಲಿ ಬಂದಿತ್ತು. ಹರಿದ ಸೆರಗು ಮತ್ತು ಕತ್ತಲು ಅವಳ ಮುಖವನ್ನು ಮರೆಮಾಡಿದ್ದವು. ಅವಳ ಎಡಗಾಲು ಇನ್ನೊಂದು ಕಾಲಿಗಿಂತ ಮೋಟ. ಇದರಿಂದ ಅವಳ ನಡಿಗೆ ಸಹಜವಾಗಿ ಎಡಗಡೆಗೆ ವಾಲುತ್ತಿತ್ತು. ಹಟ್ಟಿ ಮತ್ತು ಊರಿನ ಹಿರಿಕಿರಿಯವರೆಲ್ಲಾ ಅವಳನ್ನು 'ಕುಂಟಮಾಸ್ತಿ' ಎಂಬ ಅಡ್ಡಹೆಸರಿನಿಂದ ಕರೆಯುತ್ತಿದ್ದರು.

ಪೂಜಾರ ಚೌಡಯ್ಯನವರ ಕಣಕ್ಕೆ ಹೋಗುವ ದಾರಿಯಲ್ಲೇ ಇದ್ದ ಕ್ಷೌರಿಕರ ನರಸಿಂಹಯ್ಯನವರ ಮನೆಯ ಕಡೆ ಅವಳ ಕಣ್ಣುಗಳು ಸಹಜವಾಗಿ ತಿರುಗಿತು. ನರಸಿಂಹಯ್ಯನವರ ಹೆಂಡತಿ ಸಂಜೀವಮ್ಮ ಮಾಸ್ತಮ್ಮನನ್ನು ಆಗಾಗ್ಗೆ ಕರೆದು 'ಯಸಟ್‌ಕೋ ತಗೊಂಡು ಹೋಗು' ಅಂತ ತಾನೇ ಬಂಗದಲ್ಲಿದ್ದರೂ ಮಾಸ್ತಮ್ಮನ ಬಡತನ ನೋಡಲಾಗದೆ ಅಚ್ಚೇರೋ ಅಥವಾ ಸೇರೋ ರಾಗಿಯನ್ನು ಅವಳ ಮಡ್ಲಿಗೆ ಆಗಾಗ ಹಾಕುತ್ತಿದ್ದಳು. ತನ್ನ ಕಷ್ಟ ಸುಖವನ್ನು ಕೇಳುವ ಒಂದು ಜೀವ ನಮ್ಮ ಹಟ್ಟಿಯಾಚೆಗೂ ಇದೆಯೆಲ್ಲಾ ಎಂಬುದೇ ಮಾಸ್ತಮ್ಮನಿಗೆ ಸಮಾಧಾನದ ವಿಷಯವಾಗಿತ್ತು. ನರಸಿಂಹಯ್ಯ ಮತ್ತು ಸಂಜೀವಮ್ಮನವರಿಗಿದ್ದ ಒಬ್ಬಳೇ ಮಗಳು ಮತ್ತು ಅಳಿಯ ತೀರಿಕೊಂಡು ವರ್ಷಗಳೇ ಕಳೆದಿದ್ದವು. ವಂಶದ ಕುಡಿಯಂತಿದ್ದ ತನ್ನ ಮೊಮ್ಮಗಳು ನಾಗಮ್ಮನನ್ನು ಸಾಕಲು ನರಸಿಂಹಯ್ಯನವರ ದುಡಿಮೆ ಯಾವುದಕ್ಕೂ ಎಟಕುತ್ತಿರಲಿಲ್ಲ. 'ನಾರು ಬತ್ತಿ; ನೀರೆಣ್ಣೆ'ಯಂಗಿತ್ತು ಅವರ ಸಂಸಾರ. ಮಾಳಿಗೆಯ ಮೇಲೆ ಹೊದಿಸಿದ್ದ ಕತ್ತಾಳೆಯೆಲ್ಲವೂ ಬಿಸಿಲಿಗೆ ಒಣಗಿ ಕರುಕಲಾಗಿ ಎಂದೋ ಉದುರಿಹೋಗಿತ್ತು. ಇದರಿಂದಾಗಿ ಆಸರೆಯಿಲ್ಲದೆ ಒಂದು ಪಾರ್ಶ್ವದ ಗೋಡೆ ಮಳೆ, ಗಾಳಿಗೆ ತಡತ ಬರಲಾರದೆ ಕುಸಿದುಹೋಗಿತ್ತು. ಇದರಿಂದಾಗಿ ನರಸಿಂಹಯ್ಯನವರು ತನ್ನ ಮಾಳಿಗೆ ಮನೆಯ ಉದುರುವ ಗೋಡೆಗೆ ಮಣ್ಣು ಮೆತ್ತಿ ಮಳೆ ಗಾಳಿಗೆ ಮರೆಮಾಡಿಕೊಂಡಿದ್ದರು. ಆದರೂ ಕಾಲ ಕಾಲಕ್ಕೆ ಸುಣ್ಣ ಮತ್ತು ಸಗಣಿ ಬಗಡ ಕಾಣುತ್ತಿದ್ದರಿಂದ ಅವರ ಮನೆ ಅಚ್ಚುಕಟ್ಟಾಗಿತ್ತು. ನರಸಿಂಹಯ್ಯನವರ ವೈಯಕ್ತಿಕ ಬದುಕಿನಂತೆಯೇ ಅದಕ್ಕೊಂದು ಜೀವಕಳೆ ಇತ್ತು. ನರಸಿಂಹಯ್ಯನವರದು ಸ್ವಾಭಿಮಾನಿ ಬದುಕು. ತಾನು ಗೊತ್ತುಮಾಡಿಕೊಂಡಿದ್ದ ಸಿಂಗಿಪುರ, ಅಗಳಗುಂಟೆ, ಅಸ್ಲೀಪುರ, ಬಳ್ಳಾಪುರ, ಗೊಲ್ಲರಹಟ್ಟಿ, ಬ್ಯಾಲ್ಯ ಹೀಗೆ ನಾಲ್ಕಾರು ಹಳ್ಳಿಗಳಿಗೆ ಹೋಗಿ ತನ್ನ ವೃತ್ತಿ ಮಾಡಿಕೊಂಡು ಜೀವನ ಮಾಡುತ್ತಿದ್ದರು. ಅವರು ವರ್ಷಕ್ಕೊಮ್ಮೆ ಸುಗ್ಗಿ ಕಾಲದಲ್ಲಿ ಕೊಡುತ್ತಿದ್ದ ಅಗದಿ ಅವರ ಜೀವನಾಧಾರವಾಗಿತ್ತು. ಎಂತಹ ತಲೆಹೋಗುವ ಸನ್ನಿವೇಶ ಬಂದರೂ ಯಾರ ಮುಂದೆಯೂ ಕೈಯೊಡ್ಡಿ ದೈನೇಸಿ ಎಂದು ಬೇಡಿದವರಲ್ಲ. ಹೊತ್ತು ಮೂಡುವ ಮೊದಲೇ ನಿಗದಿಯಾದ ಹಳ್ಳಿಗೆ ಹೋಗುತ್ತಿದ್ದರು. ಮಧ್ಯಾಹ್ನದ ಹೊತ್ತಿಗೆ ಮನೆಗೆ ಬಂದು, ಹಡಪವನ್ನು ಗೂಡಿನಲ್ಲಿಟ್ಟು, ಕೈಕಾಲಿಗೆ ನೀರು ಸೋಕಿಸಿ, ಹಣೆಯ ಮೇಲೆ ಅಚ್ಚುಕಟ್ಟಾಗಿ ನಾಮವಿಟ್ಟು, ಮನೆದೇವರು ನರಸಿಂಹಸ್ವಾಮಿಗೆ ದೂಪದಕಡ್ಡಿ ಹಚ್ಚಿ, ಊಟ ಮುಗಿಸಿ ಜಗಲಿಯ ಮೇಲೆ ಕುಳಿತುಕೊಂಡರೆ; ಅಲ್ಲಿಗೆ ಅಂದಿನ ದಿನಚರಿ ಮುಗಿದಂತೆ. ರಾತ್ರಿ ಊಟವನ್ನು ಅವರು ತಮ್ಮ ಜೀವಿತಾವಧಿಯಲ್ಲಿ ಎಂದೂ ಮಾಡಿರಲಿಲ್ಲ! ಮಧ್ಯಾಹ್ನದ ನಂತರ ಯಾರೇ ಬಂದು ಕರೆದರೂ ಮನೆಬಿಟ್ಟು ಕದಲುತ್ತಿರಲಿಲ್ಲ. ಹಡಪ ಹಿಡಿಯುತ್ತಿರಲಿಲ್ಲ. ದೇವರ ತಲೆಯ ಮೇಲೆ ಹೂವಿಡುವುದನ್ನು ಮರೆತರೂ ತಾವು ಅನೂಚಾನವಾಗಿ ಪಾಲಿಸಿಕೊಂಡು ಬಂದಿದ್ದ ಈ ನೇಮವನ್ನು